REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 14 | ISSUE - 3 | DECEMBER - 2024

# ಜನಪದ ಸಾಹಿತ್ಯದಲ್ಲಿ ಅನುಭಾವ

ಡಾ. ಗೀತಾಂಜಲಿ ಎಂ. ಕುರುಡಗಿ
ಬೋಧನಾ ಸಹಾಯಕರು
ಹಾವೇರಿ ವಿಶ್ವವಿದ್ಯಾಲಯ, ಹಾವೇರಿ.



ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡ ಸಂಸ್ಕೃತಿಯ ತಿರುಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿದ್ಯಾವಂತರಿಂದ ರಚಿತವಾದ ಕೃತಿಗಳಲ್ಲದೆ ಇದಕ್ಕೆ ಹೊರತಾದ ಇನ್ನೊಂದು ಬಗೆಯ ಸಾಹಿತ್ಯವೂ ಇದರ ಜೊತೆ ಜೊತೆಯಾಗಿಯೇ ಬೆಳೆದುಬಂದಿತೆಂದು ಹೇಳಬಹುದು. ಅದು ಪಂಡಿತರಿಂದ ರಚಿತವಾದ ಗ್ರಂಥಸ್ಥ ಸಾಹಿತ್ಯವಲ್ಲ ಕಾವ್ಯ ಲಕ್ಷಣ ಸಮಸ್ವಿತವಾಗಿ ಸೃಷ್ಟಿಯಾದ ಪ್ರೌಢಸಾಹಿತ್ಯವಲ್ಲ. ದಿನ ದಿನದ ಜೀವನ ನಿರ್ವಹಣೆಯಲ್ಲಿ ತೊಡಗಿದ ಹಳ್ಳಿಗರ ಅನುಭವದಿಂದ ಮೂಡಿದ ಸಹಜ ಸಾಹಿತ್ಯ ಅದು. ಆನರ ಬಾಯಿಂದ ಬಾಯಿಗೆ ಹರಿದು ಬಂದು ಅವು ಕೃತಿಯಾಗದೆ, ಸಮಷ್ಠಿ ಮನಸ್ಸಿನ ಪ್ರತಿನಿಧಿಗಳಾಗಿ, ಸಮಷ್ಠಿ ಸಂಸ್ಕೃತಿಯ ನಿಧಿಗಳಾಗಿ ಅವು ಪರಿಣಮಿಸಿದವು ಇದನ್ನೇ, 'ಜಾನಪದ ಸಾಹಿತ್ಯ' ಎಂಬ ಹೆಸರಿನಿಂದ ಕರೆಯುವ ರೂಢಿ ಈಚೀಗೆ ಬಂದಿದೆ.

ಧರ್ಮ ನಮ್ಮ ಸಂಸ್ಕೃತಿಯ ಬೆನ್ನೆಲೆಬು, ಜೀವನದ ಎಲ್ಲ ಆಚಾರ ವ್ಯವಹಾರಗಳನ್ನು, ಚಲನವಲನಗಳನ್ನು ಅದು ವ್ಯಾಪಿಸಿದೆ ಪರಂಪರೆಯಿಂದ ಬಂದ ಧಾರ್ಮಿಕ ಶ್ರದ್ಧೆಯೇ ಹಳ್ಳಿಗರ ಬಾಳಿನ ಆಧಾರ ಅದೇ ಅವರ ಜೀವನದ ಊರು ಗೋಲು ಜೀವನದಲ್ಲಿ ಬರುವ ಕಷ್ಟ–ಸುಖಗಳಿಗೆ, ಒಳಿತು ಕೆಡುಕುಗಳಿಗೆ ಇಂದು ಮುಲಭೂತ ಶಕ್ತಿಯೊಂದಿದೆ. ಅದರ ಇಚ್ಚೆಯಂತೆ ಇವೆಲ್ಲ ನಡೆಯುತ್ತವೆ. ಆ ಶಕ್ತಿಯ ವಿರುದ್ಧ ಹೋಗುವುದು ಸಾಧ್ಯವಿಲ್ಲ ಎಂಬುದು ಹಳ್ಳಿಗರ ಜೀವನದಲ್ಲಿ ರಕ್ತಗತವಾದ ತತ್ವ ಮುಂಜಾನೆ ಎದ್ದು ದಿನದಿನದ ಕರ್ತವ್ಯಭಾರಕ್ಕೆ ಹೆಗಲು ಕೊಡುವುದರಿಂದ ಹಿಡಿದು, ರಾತ್ರಿ ದಣಿದು ಮಲಗುವವರೆಗೂ ಅವನ ಕರ್ತವ್ಯ ನಿರ್ವಹಣೆಯೆಲ್ಲಾ ಈ ಹಿನ್ನೆಲೆಯಲ್ಲಿಯೇ.

ದೇವನನ್ನು ಅನೇಕ ರೂಪಗಳಲ್ಲಿ ಕಂಡು ಸತತ ಅವನ ಸಾನಿಧ್ಯವನ್ನು ಕಲ್ಪಿಸಿಕೊಳ್ಳುವ ಶಕ್ತಿ ಹಳ್ಳಿಗರದು. ಇಲ್ಲಿ ಬಹುದೇವತೋಪಾಸನೆ ಮುಖ್ಯವಾಗಿ ಗೋಚರವಾಗುವ ಅಂಕ ಅನೇಕ ವೇಳೆ ಪ್ರಕೃತಿಯ ಒಂದೊಂದು ವಸ್ತುವೂ ಅವರಿ ದೈವಶಕ್ತಿಯ ಸಂಕೇತ. ನಿತ್ಯ ಬಳಸುವ ಉದ್ಯೋಗದ ಉಪಕರಣಗಳಲ್ಲಿಯೂ ದೈವತ್ವವನ್ನು ಕಾಣುವ ಭಾವುಕ ಶಕ್ತಿ ಅವರದು. ಇದು ವೇದ ಋಷಿಗಳಿಂದ ಹಿಡಿದು ಪರಂಪರೆಯಾಗಿ ಬಂದ ಆಸ್ತಿ, ಆಗಾಗ ಮನುಷ್ಯನನ್ನು ಪೀಡಿಸುವ ರೋಗರುಜಿನಾದಿಗಳಿಗೂ ದೈವತ್ವವನ್ನು ಆರೋಪಿಸಿ ಅವುಗಳ ಪೂಜೆಯನ್ನು ಕೈಗೊಳ್ಳುವವರೆಗೂ ಅವರ ದೈವನಿಷ್ಠೆ ಬೆಳೆದಿದೆ.

ಜನಪದ ಸಾಹಿತ್ಯದ ಯಾವುದೇ ಪ್ರಕಾರವಾಗಲಿ, ಅದರಲ್ಲಿ ಪ್ರಧಾನವಾಗಿ ಕಾಣುವ ಭಾವಗಳು ಎರಡು ಒಂದು–ಧರ್ಮಕ್ಕೆ ಸಂಬಂಧಿಸಿದುದು ಇನ್ನೊಂದು ಸಂಸಾರಕ್ಕೆ ನಿಜವಾಗಿ ನೋಡಿದರೆ ನಮ್ಮ ಜನಪದರಿಗೆ ಇವೆರಡೂ ಬೇರೆ ಬೇರೆ ಅವರ ಸಂಸಾರ ಧರ್ಮದ ತಳಹದಿಯ ಮೇಲೆ ನಿಂತು ಅವರ ಧರ್ಮ ಸಂಸಾರವನ್ನು ಒಳಗೊಂಡುದು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಅವರ ಪಲಿಗೆ ಅದೇ ಅವರ ಧಾರ್ಮಿಕ ಸಾಧನೀಯ ರಹಸ್ಯ.

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಏಕೈಕ ನಿಷ್ಠೆಗಿಂತ ಬಹುದೇನತಾ ಉಪಾಸನೆಗೆ ಕಾರಣವಾದ ಭೀತಿಯೇ ಹೆಚ್ಚು. ಒಂದೊಂದು ಉದ್ದೇಶಕ್ಕಾಗಿ ಒಂದೊಂದು ಶಕ್ತಿಯನ್ನು ಮೊರೆ ಹೋಗುತ್ತಾರೆ. ಅದರ ತೃಪ್ತಿಯಾಗಿ ಅನೇಕ ಆಚರಣೆಗಳನ್ನು ಕೈಗೊಳ್ಳುತ್ತಾರೆ. ನಾನು ಬೇರೆ ಬೇರೆಯಾದರೂ ದೇವನೊಬ್ಬನೆ ಎಂಬ ಉದಾತ್ತ ಮನಸ್ಸಿನ ತಿಳಿಯಾದ ಭಾವನೆ ಜನಪದರ ಹಾಡಿನಲ್ಲಿ ವ್ಯಕ್ತವಾಗಿದೆ.

ಮುಂಜಾನೆ ಏಳುತ್ತಿದ್ದಂತೆಯೇ ದೇವರನ್ನು ಸ್ಮರಿಸಿಕೊಂಡು ತಮ್ಮ ಕೆಲಸದಲ್ಲಿ ತೊಡಗುವುದು ಹಳ್ಳಿಗರ ಪದ್ಧತಿ,

**ಮುಂಗೋಳಿ ಕೂಗೆದ ಮಾಡು ಕೆಂಪೇರೇದ**
**ರವಿ ನಾರಾಯನ ರಥವೇರಿ। ಬರುವಾಗ**
**ನಾವೆದ್ದು ಕೈಯ್ಯ ಮುಗಿದೇವು**

ಎಂದು ರಥವೇರಿ ಬರುವ ಸೂರ್ಯ ನಾರಾಯಣನಿಗೆ ಕೈಮುಗಿಯುವ ದೃಶ್ಯವಿದೆ ಗೃಹಿಣಿಯ ಧರ್ಮ ಜೀವನಕ್ಕೆ ಸಾಕ್ಷಿಯಾಗುವಂತೆ

**ಬೆಳಗಾಗಿ ನಾನೆದ್ದು ಯಾರ್‍ಯಾರ್‍ನ ನೆನೆಯಲಿ,**
**ಎಳ್ಳು ಜೀರಿಗೆ ಬೆಳೆದಂಥ। ಭೂಮಿತಾಯಿನ**
**ಎದ್ದೊಂದು ಘಳಿಗೆ ನೆನೆದೇನ॥**

ಎಲ್ಲರನ್ನು ಹೊತ್ತು ಆಹಾರವನ್ನಿತ್ತು ಸಲಹುತ್ತಿರುವ ಭೊದೇವಿಯನ್ನು ಮೊದಲು ನೆನೆಯುತ್ತಾಳೆ ಗೃಹಿಣಿ.

ಪ್ರಾದೇಶಿಕ ಪರಿಸರಕ್ಕೆ ಅನುಗುಣವಾಗಿ ಒಮ್ಮೊಮ್ಮೆ ಕೆಲವು ದೇವತೆಗಳ ಪ್ರಭಾವ ಕಂಡು ಬರುತ್ತದೆ. ದೇವರಂತೆ ದೇವತೆಗಳ ಮೇಲೂ ನಮ್ಮ ಹಳ್ಳಿಗರು ಭಯ ಭಕ್ತಿಯಿಂದ ನಡೆದುಕೊಳ್ಳುತ್ತ ಬಂದಿದ್ದಾರೆ. ಕೆಲವರಿಗೆ ಈ ದೇವತೆಗಳು ಗೃಹದೇವತೆಗಳಾಗಿವೆ. ಬೇರೆ ಕೆಲವರಿಗೆ ಕುಲದೇವತೆಗಳಾಗಿವೆ, ಇನ್ನು ಕೆಲವರಿಗೆ ಗ್ರಾಮ ದೇವತೆಗಳಾಗಿವೆ. ಅಲ್ಲದೆ ಕೆಲವರು ಈ ದೇವತೆಗಳನ್ನು ಆತ್ಮದೇವತೆಗಳೆಂದು ಪೂಜೆ ಮಾಡುತ್ತಾರೆ.

ನಮ್ಮ ಗರತಿಯರು ಬಂದ ವಿಪತ್ತುಗಳೆಲ್ಲವನ್ನು ಪಾರುಮಾಡುವ ಶಕ್ತಿಯೊಂದನ್ನು ನಂಬಿ ನೆಚ್ಚಿದ್ದಾಳೆ. ಈಕೆ ಅದರಿಂದ ಎಲ್ಲ ಭಯಗಳನ್ನು ಮೀರಿನಿಂತಿದ್ದಾಳೆ

**ದೇವರ ನೆನೆದರ ಸಾವುಂಟು ನಮಗಿಲ್ಲ।**
**ಹಾವು ಕಚ್ಚಿದರು ವಿಷವಿಲ್ಲ। ಸರ್ಪದ**
**ಹೆಡೆಯ ದಾಟಿದರೂ ಭಯವಿಲ್ಲ॥**

ಆತನ ಕರುಣವೊಂದಿದ್ದರೆ ವಿಷದ ಭಯ, ಸರ್ಪದ ಭಯ, ಯಾವುದೂ ಇಲ್ಲ "ಕರುಣ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ" ಎಂಬ ಮಾತು ಒಂದು ತ್ರಿಪದಿಯಲ್ಲಿ ಬರುತ್ತದೆ.

ಬೀಸುವ ಕಲ್ಲಿನಲ್ಲಿಯೂ ಗೃಹಿಣಿಯರು ದೈವತ್ವವನ್ನು ಕಂಡಿದ್ದಾರೆ.

**ಕಲ್ಲವ್ವ ಮಾತಾಯಿ ಮಲ್ಲವ್ವ ರಾಜನವ**
**ಜಲ್ಲ ಜಲ್ಲನೆ ಉದುರುವ್ವ। ನಾನಿನಗೆ**
**ಬೆಲ್ಲದಾರತಿಯ ಬೆಳಗೇನು॥**

ಎಂದು ಒಬ್ಬ ಗೃಹಿಣಿಯ ಹಾಡುತ್ತಾಳೆ ಬೀಸುತ್ತಾ

**ನಿದ್ದಿಗಣ್ಣೆಲಿ ಕಂಡ ಸುದ್ದ ಗುರುವಿನ ಪಾದ,**
**ಎದ್ದು ನೋಡಿದರೆ ನಿರಬಯಲ। ಗುರುರಾಯ**
**ರುದ್ದರನ ಮಹಿಮೆ ತಿಳಿಯಾದ॥**

ನಿದ್ದೆಗಣ್ಣಿನಲ್ಲಿ ಕೂಡ ಸದ್ಗುರುವಿನ ಪಾದವನ್ನು ಕಾಣುವ ಗೃಹಿಣಿಯ ಸಾಧನೆ ಕೇವಲ ಬಹಿರಂಗದ ಉಪಾಸನೆ ಉತ್ಸವಗಳಿಗೆ ಮೀಸಲಾದುದಲ್ಲ. ಅಂತರ್ಮುಖಿ ಸಾಧನೆ ಅಲ್ಲಿ ಕಾಣುತ್ತದೆ. ಗರತಿಯ ಹಾಡುಗಳಲ್ಲಿ ಇಂತಹ ನಿಷ್ಠೆ ಅಲ್ಲಲ್ಲಿ ಮೈವೆತ್ತಿದೆ. "ಮಾದೇವ ನಿನ ಹೊರತು ನಾನಾರ ನಂಬಿಲ್ಲ" ಎಂಬ ನಿಷ್ಠೆಯುಳ್ಳ ಒಬ್ಬ ಗೃಹಿಣಿ ಹೀಗೆ ಹೇಳುತ್ತಾಳೆ.

ಮುಂದೇನು ಕೊಟ್ಟೀತ ಮನವೇನು ದಣಿದೀತ।

**ಮುಂಜಾನದಾಗ ಗಿರಿಮಲ್ಲ। ಕೊಟ್ಟರೆ,**
**ಮನಿ ತುಂಬಿ ನಮ್ಮ ಮನ ತುಂಬಿ॥**
**ಎದ್ದೂನೆ ನಿಮಧ್ಯಾನ ಏಳತಲೆ ನಿಮ್ಮಧ್ಯಾನ**
**ಸಿದ್ಧರ ಧ್ಯಾನ ಶಿವಧ್ಯಾನ। ಮಾಶಿವನೆ**
**ನಿದ್ದೆಗಣ್ಣಾಗೆ ನಿಮಧ್ಯಾನ॥**

ಗಿರಿಮಲ್ಲನ ಅನುಗೃಹದಿಂದ ಮನೆತುಂಬಿದ ಗೃಹಿಣಿ ನಿದ್ದೆಗಣ್ಣಿನಲ್ಲಿಯೂ ಅವನನ್ನು ಸ್ಮರಿಸುವ ಸಾಧಕಿಯಾಗಿ ಪರಿಣಮಿಸಿದ್ದಾಳೆ

ಈ ನಿಲುವಿಗಿಂತ ಮುಂದಿನ ಹೆಜ್ಜೆಯನ್ನು ಮುಟ್ಟಿದ ಆಧ್ಯಾತ್ಮಿಕ ಸಾಧಕರು ಹಳ್ಳಿಗಳಲ್ಲಿ ಅಲ್ಲಲ್ಲಿ ಕಾಣುತ್ತಾರೆ. ಗುಪ್ತಯೋಗಿಗಳು ಅವರು ಗಣಪತಿ, ಲಕ್ಷ್ಮೀ, ಸರಸ್ವತಿ, ಹನುಮಂತ ಮೊದಲಾದ ಇತರ ದೇವರುಗಳ ಸ್ತುತಿಗಳೂ ಇಲ್ಲಿ ಬರುತ್ತವೆ. ಎಲ್ಲ ವಿದ್ಯೆಗೂ ಅಧಿದೇವತೆಯಾದ ಸರಸ್ವತಿಯನ್ನು ಕುರಿತು ಹಾಡಿಸುವ ಕೆಲವೂ ಗೀತೆಗಳಂತೂ ಸ್ಮರಣೀಯವಾಗಿವೆ.

**ಏಳೆಲೆ ಮಾವಿನ ತಾಳಿನಲ್ಲಿರುವೋಳೆ**
**ತಾಳದ ಗತಿಗೆ ನಲಿಯೋಳೆ। ಸರಸೋತಿ**
**ನಾಲಿಗೆಗಕ್ಷರವ ಕಲಿಸವ್ವ॥**
**ತಾಯಿಯ ನೆನೆದರೆ ಬೇಗನೆ ಪದಬರಲಿ।**
**ಗಾಗಿ ಗಿಡದಾಗ ನೆಲಸೀದ। ತಾಯಿ ಸರಸೂತಿಗೆ**
**ಭಕುತಿಲೆ ಕೈ ಮುಗಿದು ಬೇಡೇನ**
**ಅಕ್ಕವ್ವ ಸರಸೋತಿ ಬಾಗ್ಲಾಗ ಯಾಕ್ನಿಂತಿ**
**ಕೊಡುತೀನಿ ಬಾರ ನಿನಗಿಂಬ। ನನ್ಮನದ**
**ಜಗುಲೀಮ್ಯಾಗ ಬರಗವ್ವ॥**

ನಾಲಿಗೆಗೆ ಅಕ್ಷರವನ್ನು ಕಲಿಸುವಂತೆ, ಮನದ ಜಗುಲಿಯ ಮೇಲೆ ಒರಗುವಂತೆ ಸರಸ್ವತಿಯನ್ನು ಆಹ್ವಾನಿಸುತ್ತಾರೆ. "ನಮ್ಮಿಬ್ಬರಿಗೆ ಬಾರದ ಪದವ ಬರಕೊತಿ" ಎಂಬ ಮಾತು ಇನ್ನೊಂದು ಗೀತೆಯಲ್ಲಿ ಬರುತ್ತದೆ. ಪದಗಳನ್ನು ಬರೆದುಕೊಡುವಂತೆ ಸರಸ್ವತಿಯನ್ನೇ ಕೇಳುತ್ತಾರೆ, ಬೀಸುವ ಕಲ್ಲಿನ ಮುಂದೆ ಕುಳಿತು ಆ ಇಬ್ಬರು ಅವರ ಅನೇಕ ಪದಗಳನ್ನು ನೋಡಿದರೆ ಬಹುಶಃ ಸರಸ್ವತಿಯೇ ನಾಲಿಗೆಗಕ್ಷರನ ಕಲಿಸಿ, ಪದಗಳನ್ನು ಬರೆದುಕೊಟ್ಟಿರಬೇಕೆಂದು ತೋರುತ್ತದೆ.

ಹಳ್ಳಿಗಳಲ್ಲಿ ಕಂಡು ಬರುವ ಇನ್ನೊಂದು ದೇವರೆಂದರೆ ಊರ ಹೊರಗಿನ 'ಹನಮಪ್ಪ', 'ಊರ ಸುಟ್ಟರು ಹನುಮಪ್ಪ ಹೊರಗೆ' ಎಂಬ ಗಾದೆಯ ಕನ್ನಡಿಯಲ್ಲಿ ಬಳಕೆಯಲ್ಲಿದೆ. ಹನುಮಂತ ಎಲ್ಲ ಜಾತಿ ಪಂಗಡದವರಿಗೂ ದೇವರಾಗಿ ಪೂಜೆಗೊಳ್ಳುತ್ತಾನೆ.

**ಹಚ್ಚನ ಹರಿನಾಮ ಮುತ್ತಿನ ಗೋಪಾಳ**
**ಹೊತ್ತೇರಿ ಬರುವ ಇವನ್ಯಾರೊ। ಕೆರೂರ**
**ಗಟ್ಟೀಗ ಗುಡಿಯ ಕರಿ ಹನಮೊ॥**

ಎಂದು ಹನುಮಂತನನ್ನು ನೆನೆಯುವಂತದ್ದು ಹಾಗೆಯೇ

**ಊರ ಊರಿಗೆ ಕಟ್ಟು, ಊರಿಗೆ ಕಾವಲು**
**ಯಾರಿಲ್ಲ ತಾಯಿ ನಿನಬಿಟ್ಟು। ದ್ಯಾಮವ್ವ**
**ತೇರೆಳೆದು ಕೈಯ ಮುಗಿದೇವೊ॥**

ಎಂದು ಗ್ರಾಮ ದೇವತೆಯಾದ ದ್ಯಾಮವ್ವನನ್ನು ಸತ್ಯುಳ್ಳವಳೆಂದು ಒಕ್ಕಲಿಗನು ತೆರೆಳಿದು ಕೈ ಮುಗಿದ್ದಿದ್ದಾನೆ.

ಶಿವಶರಣರ ಸಾಧು-ಸತ್ಪುರುಷರ ಪಾದಧೂಳಿಯಿಂದ ಕನ್ನಡ ನಾಡು ಪಾವನವಾಗಿದೆ. ಇವರ ಪವಾಡಗಳನ್ನು ಲೀಲೆಗಳನ್ನು ಕಂಡು ಕೇಳಿದ ಜನಪದವು ಇವರನ್ನು ಹಾಡಿ ಕೊಂಡಾಡುತ್ತ ಬಂದಿದೆ. ಸದಾಚಾರ ಸಂಪನ್ನರಾದ ಶಿವಶರಣರ ಪ್ರಭಾವವು ಜನತೆಯ ಮೇಲೆ ಬಹಳವಾಗಿದೆ. ನೂರೊಂದು ಶಿವಶರಣರ ಹಂತಿಯ ಹಾಡುಗಳ ಸಾವಿರಾರು ಪದ್ಯಗಳು ದೊರೆಯುತ್ತವೆ.

ಈ ಸಾಹಿತ್ಯದ ಸವಿನೆನಪನ್ನು ಎಷ್ಟು ಬಣ್ಣಿಸಿದರೂ ಸಾಲದು.

**ಶರಣರ ನೆನೆದರ, ಸರಗೀಯ ಇಟ್ಟಾಂಗ**
**ಅರಳ ಮಲ್ಲಿಗೆ ಮುಡಿದ್ಹಂಗ ಕಲ್ಯಾನ**
**ಶರಣರ ನೆನೆಯೊ ನನ ಮನವೆ॥**

ಎಂದು ಒಕ್ಕಲಿಗ ಕಲ್ಯಾಣ ಶರಣನನ್ನು ನೆನೆದಿದ್ದಾನೆ. ಕಲ್ಯಾಣ ಬಸವಣ್ಣನ ಮಹಿಮೆಯ ಕೂಗು ನಮ್ಮ ಹಳ್ಳಿ ಹಳ್ಳಿಗಳಿಗೆಲ್ಲ ಕೇಳಿಲೇಬೇಕು. ಆ ಮಹಿಮೆಯನ್ನು ಸಾಕ್ಷಾತ್ ದೇವರೆಂದು ತಿಳಿದ ನಮ್ಮ ರೈತನು–

**ಕರುಣ ಬಂದರೆ ಕಾಯೊ, ಮರಣ ಬಂದರೆ ಒಯ್ಯೊ,**
**ಕರುಣೆ ಕಲ್ಯಾಣ ಬಸವಣ್ಣ। ಶಿವಲಿಂಗ**
**ಕಡೆತನಕ ಕಾಯೊ ಅಭಿಮಾನ॥**

ಎಂದು ಬಸವಣ್ಣನ ಬಗ್ಗೆ ತಾಳಿದ ಭಾವನೆಯನ್ನು ಭಕ್ತಿ ಸೂಸಿ ಹಾಡಿದ್ದಾರೆ. 'ಲಿಂಗಯ್ಯನ' ಪವಿತ್ರತೆಯನ್ನರಿತ ಒಕ್ಕಲಿಗನಿಗೆ ಆ ದಿವ್ಯ ತೇಜವು ಚೈತನ್ಯ ತುಂಬಿದಂತೆ ಕಾಣುತ್ತದೆ.

**ಆರೂತಿ ಹಿಡಕೊಂಡು, ಆರ್ಯಾಣ ತಿರಗೀದೆ**
**ದೇವರಿಲ್ಲೇನ ಗುಡಿಯಾಗ। ಲಿಂಗಯ್ಯ**
**ಮಾಯವಿಲ್ಲೇನ ನನಮ್ಯಾಲೆ॥**

ಆ ದಿವ್ಯ ತೇಜಸ್ಸಿನಲ್ಲಿ ಈ ಜಗತ್ತಿನ ಆಗುಹೋಗುಗಳು ನಡೆದಿವೆ. ಅವನ ಆಶೀರ್ವಾದವು ತನಗಿರಲೆಂದು ಲಿಂಗಯ್ಯನನ್ನು ಮಹಾದೇವರೆಂದು ಆರಾಧಿಸುತ್ತಾನೆ. ಆ ಲಿಂಗದ ಬೆಲಕಿನಿಂದಲೇ ಅಜ್ಞಾನವೆಂಬ ನಿದ್ದೆಯು ಬಯಲಾಗುವದೆಂದು ರೈತನು ನಂಬಿದ್ದಾರೆ.

ಒಟ್ಟಿನಲ್ಲಿ ಜನಪದ ಸಾಹಿತ್ಯ, ಧಾರ್ಮಿಕ ಮನೋಧರ್ಮದ ಎಲ್ಲ ಹಂತಗಳನ್ನು ಪ್ರತಿಬಿಂಬಿಸುತ್ತದೆನ್ನುವುದನ್ನು ಈ ಸ್ಥೂಲವಾದ ಅವಲೋಕನದಿಂದಲೇ ಕಂಡುಕೊಳ್ಳಬಹುದಾಗಿದೆ. ಇವುಗಳನ್ನು ಇನ್ನೂ ವಿವರವಾಗಿ ವಿವಿಧ ಪ್ರಾದೇಶಿಕ ಮಟ್ಟಗಳಲ್ಲಿ ತೆಗೆದುಕೊಂಡು ತೌಲನಿಕವಾಗಿ ಅಭ್ಯಾಸ ಮಾಡುವ ಅವಶ್ಯಕತೆಯಿದೆ. ಅಂತೆಯೇ ವಿವಿಧ ಜನಾಂಗಗಳ ಸಂಘರ್ಷಣೆಯಿಂದ ಧಾರ್ಮಿಕ ಜೀವನದ ಮೇಲಾದ ಪ್ರಭಾವ ಪರಿವರ್ತನೆಗಳನ್ನು ಚಾರಿತ್ರಿಕವಾಗಿ ಗುರುತಿಸುವುದು ಬಹುಕುತೂಹಲಕಾರಿಯಾದ ಅಂಶ. ಒಂದು ದೃಷ್ಠಿಯಿಂದ ಮಾನವಶಾಸ್ತ್ರದ ಅಧ್ಯಯನವನ್ನು ಮಾಡಬಹುದು. ಪ್ರಸ್ತುತ ಉದ್ದೇಶಕ್ಕನುಗುಣವಾಗಿ ಪ್ರಮುಖವಾದ ಕೆಲವು ಧಾರ್ಮಿಕ ಗೀತೆಗಳನ್ನು ನೋಡಿ ಅದರಿಂದ ಜನತೆಯ ಸಮಷ್ಠಿ ಮನಸ್ಸಿನ ಒಂದು ಅಂಶವನ್ನು ಮಾತ್ರ ಗಮನಿಸಲಾಗಿದೆ.

## ಆಧಾರ ಗ್ರಂಥಗಳು

೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ. ಎಚ್. ತಿಪ್ಪೆರುದ್ರಸ್ವಾಮಿ
೨. ಕನ್ನಡ ಜಾನಪದ ಗೀತೆಗಳು – ಡಾ. ಬಿ. ಎಸ್. ಗದ್ದಗಿಮಠ